# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು- 572 103

**ದಿನಾಂಕ: 17.01.2023 ರಂದು ಬೆಳಗ್ಗೆ 11:00 ಗಂಟೆಗೆ ನಡೆದ 2022-23ನೇ ಸಾಲಿನ ಪ್ರಥಮ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು**

**ಹಾಜರಾದ ಸದಸ್ಯರು**

| | | |
|---|---|---|
| 1. | ಪ್ರೊ. ಎಂ. ವೆಂಕಟೇಶ್ವರಲು, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಡಾ. ಕೆ.ಸಿ ಜಯಸ್ವಾಮಿ<br>ಪ್ರಾಂಶುಪಾಲರು, ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಿಳಾ ಕಾಲೇಜು, ಬಿ.ಹೆಚ್. ರಸ್ತೆ, ತುಮಕೂರು. | ಸದಸ್ಯರು |
| 3. | ಡಾ. ಚಿತ್ತರಂಜನ್ ರೈ,<br>ಪ್ರಾಂಶುಪಾಲರು, ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜು, ತಿಪಟೂರು | ಸದಸ್ಯರು |
| 4. | ಡಾ. ಮಾಲತಿ ವಿ.,<br>ಪ್ರಾಂಶುಪಾಲರು, ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು, ತಿಪಟೂರು. | ಸದಸ್ಯರು |
| 5. | ಡಾ. ಸರಸ್ವತಿ ಕೆ.ಬಿ.,<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು. | ಸದಸ್ಯರು |
| 6. | ಶ್ರೀಮತಿ ವಸಂತ ಟಿ.ಡಿ.<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ತುಮಕೂರು. | ಸದಸ್ಯರು |
| 7. | ಡಾ. ಭಾನುಪ್ರಕಾಶ್ ಕೆ.ಎ.,<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬುಕ್ಕಾಪಟ್ಟಣ | ಸದಸ್ಯರು |
| 8. | ಡಾ. ಹೆಚ್. ಪಿ. ವೀರಭದ್ರಸ್ವಾಮಿ,<br>ಪ್ರಾಂಶುಪಾಲರು, ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ತುಮಕೂರು | ಸದಸ್ಯರು |
| 9. | ಡಾ. ಪ್ರಸನ್ನ, ಪ್ರಾಂಶುಪಾಲರು,<br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ | ಸದಸ್ಯರು |
| 10. | ಡಾ. ಶ್ರೀಧರ್ ಎನ್.<br>ಪ್ರಾಂಶುಪಾಲರು, ಶ್ರೀಮತಿ ಮತ್ತು ಶ್ರೀ ವೈ.ಇ.ರಂಗಯ್ಯಶೆಟ್ಟಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾವಗಡ. | ಸದಸ್ಯರು |
| 11. | ಡಾ. ನೂರ್‌ಅಫ್ಜಾ<br>ಪ್ರಾಧ್ಯಾಪಕರು, ಸ್ನಾತಕೋತ್ತರ ವ್ಯವಹಾರ ಆಡಳಿತ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | ಸದಸ್ಯರು |
| 12. | ಡಾ. ನಿತ್ಯಾನಂದ ಬಿ. ಶೆಟ್ಟಿ<br>ಪ್ರಾಧ್ಯಾಪಕರು, ಡಾ. ಡಿ.ವಿ ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | ಸದಸ್ಯರು |
| 13. | ಡಾ. ಅಣ್ಣಮ್ಮ<br>ಪ್ರಾಧ್ಯಾಪಕರು, ಡಾ. ಡಿ.ವಿ ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | ಸದಸ್ಯರು |
| 14. | ಡಾ. ಜಿ. ಸುದರ್ಶನ ರೆಡ್ಡಿ<br>ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | ಸದಸ್ಯರು |
| 15. | ಡಾ. ಮನೋಹರ್ ಶಿಂಧೆ,<br>ಪ್ರಾಧ್ಯಾಪಕರು, ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | ಸದಸ್ಯರು |

| | | |
|---|---|---|
| 16. | ಡೀನರು, ವಿಜ್ಞಾನ ನಿಕಾಯ | ಸದಸ್ಯರು |
| 17. | ಡೀನರು, ಕಲಾ ನಿಕಾಯ | ಸದಸ್ಯರು |
| 18. | ಡೀನರು, ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ ನಿಕಾಯ | ಸದಸ್ಯರು |
| 19. | ಶ್ರೀ ಸಿ.ಎಂ.ಸಿ. ಮಹೇಶ್, | ಸದಸ್ಯರು |
| 20. | ಶ್ರೀ ಎಂ.ಪಿ. ಪ್ರಸನ್ನ | ಸದಸ್ಯರು |
| 21. | ಶ್ರೀ ಅಜಯ್ ಎಂ.ವಿ. | ಸದಸ್ಯರು |
| 22. | ಶ್ರೀಮತಿ ರೇಖಾ ಎನ್. | ಸದಸ್ಯರು |
| 23. | ದಿವ್ಯರಾಣಿ ಕೆ. ಸಂಶೋಧನಾ ವಿದ್ಯಾರ್ಥಿ, ರಸಾಯನಶಾಸ್ತ್ರ ವಿಭಾಗ, ತುಮಕೂರು. | ಸದಸ್ಯರು |
| 24. | ರಂಜಿತಾ ಕೆ.ಎನ್. ಪ್ರಥಮ ಎಂ.ಎಸ್.ಡಬ್ಲ್ಯೂ. ಸ್ನಾತಕೋತ್ತರ ವಿಭಾಗ. | ಸದಸ್ಯರು |
| 25. | ಸೈಯೆದಾ ಹನಿಯಾ, ಪ್ರಥಮ ಬಿ.ಎ. ಇಂಗ್ಲೀಷ್, ಎನ್.ಸಿ.ಸಿ. ವಿಭಾಗ | ಸದಸ್ಯರು |
| 26. | ಪ್ರೊ. ಪಿ. ಪರಮಶಿವಯ್ಯ<br>ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿರ್ದೇಶಕರು, ತುಮಕೂರು ವಿಶ್ವವಿದ್ಯಾನಿಲಯ | ಸದಸ್ಯರು |
| 27. | ಡಾ. ಸಂಪತ್ ಕುಮಾರ್ ಬಿ.ಟಿ<br>ಯೋಜನೆ, ಮೇಲ್ವಿಚಾರಣೆಯ ಸಮಿತಿಯ ನಿರ್ದೇಶಕರು, ತುಮಕೂರು ವಿಶ್ವವಿದ್ಯಾನಿಲಯ | ಸದಸ್ಯರು |
| 28. | ಡಾ. ಪಾಟೀಲ್ ಮಲ್ಲಿಕಾರ್ಜುನ.ಬಿ, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ | ಸದಸ್ಯರು |
| 29. | ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 30. | ಕುಲಸಚಿವರು | ಸದಸ್ಯ ಕಾರ್ಯದರ್ಶಿ |

## ಹಾಜರಾಗದ ಸದಸ್ಯರು

| | | |
|---|---|---|
| 1. | ಶ್ರೀ ಕೆ. ಗೋವಿಂದರಾಜ್, ವಿಧಾನ ಪರಿಷತ್ ಸದಸ್ಯರು, ಕರ್ನಾಟಕ ಸರ್ಕಾರ, ಬೆಂಗಳೂರು | ಸದಸ್ಯರು |
| 2. | ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರು ಅಥವಾ ಅವರ ಪ್ರತಿನಿಧಿ<br>ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 3. | ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರು | ಸದಸ್ಯರು |
| 4. | ಶ್ರೀ ಜ್ಯೋತಿಗಣೇಶ್ ಜಿ.ಬಿ ಮಾನ್ಯ ವಿಧಾನಸಭಾ ಸದಸ್ಯರು, ಗಾಂಧೀನಗರ, ತುಮಕೂರು | ಸದಸ್ಯರು |
| 5. | ಶ್ರೀ ಚಿದಾನಂದ್ ಎಂ. ಗೌಡ, ಮಾನ್ಯ ವಿಧಾನ ಪರಿಷತ್ ಸದಸ್ಯರು, ಬೆಂಗಳೂರು. | ಸದಸ್ಯರು |
| 6. | ಪ್ರೊ. ಕೆ. ನರಹರಿ,<br>ನಿವೃತ್ತ ಪ್ರಾಧ್ಯಾಪಕರು, ಬಿ.ಎಂ.ಎಸ್. ತಾಂತ್ರಿಕ ಮಹಾವಿದ್ಯಾಲಯ, ಬೆಂಗಳೂರು | ಸರ್ಕಾರದಿಂದ ವಿಶೇಷ ಆಹ್ವಾನಿತರು |
| 7. | ಶ್ರೀ ದೀರಜ್ ಯಾದವ್ ಎಂ. | ಸದಸ್ಯರು |
| 8. | ಶ್ರೀಮತಿ ಪ್ರೀತಿ | ಸದಸ್ಯರು |
| 9. | ಶ್ರೀಮತಿ ಲತಾ ಬಿ.ಎಸ್. ಶ್ರೀ ಸಿದ್ಧಾರ್ಥ ಶಿಕ್ಷಣ ಮಹಾವಿದ್ಯಾಲಯ, ತುಮಕೂರು. | ಸದಸ್ಯರು |
| 10. | ಶ್ರೀಮತಿ ಗಾಯತ್ರಿ ಡಿ.ಎಂ. | ಸದಸ್ಯರು |

| | | |
|---|---|---|
| 11. | ಶ್ರೀ ಕೆ.ಎ. ನಾಗೇಂದ್ರರಾವ್ | ಸದಸ್ಯರು |
| 12. | ಡಾ. ಆರ್. ಡಿ. ಸತೀಶ್ | ಸದಸ್ಯರು |
| 13. | ಅರ್ಚನಾ ಎಸ್. ಪ್ರಥಮ ಬಿ.ಕಾಂ., ಎನ್.ಎಸ್.ಎಸ್ ಕೋಶ, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು. | ಸದಸ್ಯರು |
| 14. | ಸಮೀರಾ ಸಿ.ಜೆ. ಪ್ರಥಮ ಬಿ.ಎಸ್ಸಿ. ಕ್ರೀಡಾ ವಿಭಾಗ, ತುಮಕೂರು. | ಸದಸ್ಯರು |
| 15. | ದೀಪಿಕಾ ಎ ವೈಷ್ಣವ್, ಪ್ರಥಮ ಬಿ.ಎ. ಇಂಗ್ಲೀಷ್, ತುಮಕೂರು. | ಸದಸ್ಯರು |

**ಪ್ರಸ್ತಾವನೆ:**

ವಿಶ್ವವಿದ್ಯಾನಿಲಯದ ಮಾನ್ಯ ಕುಲಸಚಿವರು ದಿನಾಂಕ:17.01.2023 ಮಂಗಳವಾರ ಬೆಳಿಗ್ಗೆ 11:00ಕ್ಕೆ ನಡೆದ 2022-23ನೇ ಸಾಲಿನ ಪ್ರಥಮ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು. ಮಾನ್ಯ ಕುಲಪತಿಯವರು, ತುಮಕೂರು ವಿಶ್ವವಿದ್ಯಾನಿಲಯಕ್ಕೆ ನೂತನವಾಗಿ ಆಗಮಿಸಿದ ಡಾ. ಪ್ರಸನ್ನಕುಮಾರ್ ಕೆ. ಕುಲಸಚಿವರು (ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರನ್ನು ಆತ್ಮೀಯವಾಗಿ ಸ್ವಾಗತಿಸಿದರು. ತದನಂತರ ಸಭೆಯಲ್ಲಿ ಈ ಕೆಳಕಂಡ ಕಾರ್ಯಸೂಚಿಗಳ ಬಗ್ಗೆ ಚರ್ಚಿಸಿ ನಿರ್ಣಯಗಳನ್ನು ಕೈಗೊಳ್ಳಲಾಯಿತು.

| ಕ್ರ ಸಂ. | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ನಿರ್ಣಯಗಳು |
|---|---|---|---|
| **ದಿನಾಂಕ 05.05.2022 ರಂದು ನಡೆದ ಎರಡನೇ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆ ಮತ್ತು ದಿನಾಂಕ 02.07.2022ರಂದು ನಡೆದ ಎರಡನೇ ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆಗಳು ಹಾಗೂ ದಿನಾಂಕ: 26.08.2022 ರಂದು ನಡೆದ ಮೂರನೇ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆ ಹಾಗೂ ದಿನಾಂಕ 13.12.2022 ರಂದು ನಡೆದ ಮೂರನೇ ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳ ದೃಢೀಕರಣ.** | | | |
| **ಪರೀಕ್ಷಾ ವಿಭಾಗ** | | | |
| 1. | 2022-23.ಸಾ.ವಿ.ವಿ.ಪ-01 ಪರೀಕ್ಷಾ ವಿಭಾಗ-01 | ಡಿ.ಲಿಟ್./ಡಿ.ಎಸ್ಸಿ. ಪದವಿಗಾಗಿ ಮಹಾಪ್ರಬಂಧಗಳನ್ನು ಸಲ್ಲಿಸುವ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕವನ್ನು ಪರಿಷ್ಕರಿಸುವ ಕುರಿತು. | ಡಿ.ಲಿಟ್./ಡಿ.ಎಸ್ಸಿ. ಪದವಿಗಾಗಿ ಮಹಾಪ್ರಬಂಧಗಳನ್ನು ಸಲ್ಲಿಸುವ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕವನ್ನು ಪರಿಷ್ಕರಿಸುವ ಕುರಿತು ಚರ್ಚಿಸಿದ ಸಭೆಯು ಎಲ್ಲಾ ನಿಕಾಯದ ಡೀನರ ಸಮಿತಿಯ ಶಿಫಾರಸ್ಸಿನಂತೆ ಪ್ರಸ್ತುತ ಇರುವ ಅರ್ಜಿ ಶುಲ್ಕವನ್ನು ರೂ.1,05.000.00 ಗಳಿಂದ ರೂ.2,10,000.00 ಗಳಿಗೆ ಹೆಚ್ಚಿಸಲು ಸಭೆಯು ಅನುಮೋದಿಸಿ, ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.<br>ಮುಂದುವರೆದು, ಯು.ಜಿ.ಸಿ. 2018ರ ನಿಯಮಾವಳಿಯ ಪ್ರಕಾರ ಡಿ.ಲಿಟ್. ವಿನಿಯಮದಲ್ಲಿ Plagiarism (ಕೃತಿಚೌರ್ಯ) ತಪಾಸಣೆಯು, 10% ಕ್ಕಿಂತ ಕಡಿಮೆ ಹೋಲಿಕೆ ಇರುವ ಹಾಗೆ ಪರಿಷ್ಕರಣೆ ಮಾಡಲು ಸಭೆಯು ತೀರ್ಮಾನಿಸಿತು. |
| 2. | 2022-23.ಸಾ.ವಿ.ವಿ.ಪ-01 ಪರೀಕ್ಷಾ ವಿಭಾಗ-01 | ವಿವಿಧ ಸ್ನಾತಕ ಪದವಿ ಪರೀಕ್ಷೆಗಳ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾದ ವಿದ್ಯಾರ್ಥಿಗಳನ್ನು ಹಾಗೂ ಪರೀಕ್ಷಾ ಲೋಪದೋಷಗಳಿಗೆ ಸಂಬಂಧಿಸಿದಂತೆ, ಅಧ್ಯಾಪಕರನ್ನು | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ದಿನಾಂಕ:05.01.2023 ರಂದು ನಡೆದ ಪರೀಕ್ಷಾ ಅಕ್ರಮ ಚಟುವಟಿಕೆಗಳ ವಿಚಾರಣಾ ಸಮಿತಿ/ ಪರೀಕ್ಷಾ ಲೋಪದೋಷ ವಿಚಾರಣಾ ಸಮಿತಿಯ ಸಭಾ ನಡಾವಳಿಯಲ್ಲಿನ ಶಿಫಾರಸ್ಸಿನಂತೆ ಕ್ರಮ |

| | | | |
|---|---|---|---|
| | | ವಿಚಾರಣಾ ಸಮಿತಿಯ ಮುಂದೆ ವಿಚಾರಣೆಗೆ ಒಳಪಡಿಸಲಾಗಿದ್ದು, ಸದರಿ ಸಭೆಯ ನಡಾವಳಿಗಳ ಕುರಿತು. | ಕೈಗೊಳ್ಳಲು ಸಭೆಯು ಅನುಮೋದಿಸಿ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| **ಕಾಲೇಜು ಅಭಿವೃದ್ಧಿ ಪರಿಷತ್** | | | |
| 3. | 2022–23.ಸಾ.ವಿ.ವಿ.ಪ–01 ಕಾ.ಅ.ಪ.–01 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್ ಈ ಕಾಲೇಜಿಗೆ 2022–23ನೇ ಶೈಕ್ಷಣಿಕ ಸಾಲಿಗೆ ಎಂ.ಕಾಂ. ಪದವಿಯ ಪ್ರವೇಶಾತಿಗೆ ಹಾಲಿ ಇರುವ 40 ಪ್ರವೇಶ ಮಿತಿಗೆ ಹೆಚ್ಚುವರಿಯಾಗಿ 20 ಸೀಟುಗಳನ್ನು ಪ್ರವೇಶ ಮಾಡಿಕೊಳ್ಳಲು ಅನುಮತಿ ನೀಡುವಂತೆ ಕೋರಿರುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ 2022–23ನೇ ಶೈಕ್ಷಣಿಕ ಸಾಲಿಗೆ ಎಂ.ಕಾಂ. ಪದವಿಯ ಪ್ರವೇಶಾತಿಗೆ ಹಾಲಿ ಇರುವ 40 ಪ್ರವೇಶ ಮಿತಿಗೆ ಹೆಚ್ಚುವರಿಯಾಗಿ 20 ಸೀಟುಗಳನ್ನು ಪ್ರವೇಶ ಮಾಡಿಕೊಳ್ಳಲು ಅನುಮತಿಸಲು ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮವನ್ನು ಅನುಮೋದಿಸಿ, ಸಭೆಯು ಸ್ಥಿರೀಕರಿಸಿತು. |
| **ಶೈಕ್ಷಣಿಕ ವಿಭಾಗ** | | | |
| 4. | 2022–23.ಸಾ.ವಿ.ವಿ.ಪ–01 ಶೈ.ವಿ.–01 | ಸ್ನಾತಕೋತ್ತರ ಸೂಕ್ಷ್ಮಜೀವಶಾಸ್ತ್ರ (ಎಂ.ಎಸ್ಸಿ. – ಸೂಕ್ಷ್ಮಜೀವಶಾಸ್ತ್ರ) ವಿಷಯದ ನೂತನ ಪಠ್ಯಕ್ರಮವನ್ನು ಅನುಮೋದಿಸಿ ಅಧಿಸೂಚಿಸಿರುವ ಕುರಿತು ಸ್ಥಿರೀಕರಣ ಕೋರಿ. | ಸ್ನಾತಕೋತ್ತರ ಸೂಕ್ಷ್ಮಜೀವಶಾಸ್ತ್ರ (ಎಂ.ಎಸ್ಸಿ. – ಸೂಕ್ಷ್ಮಜೀವಶಾಸ್ತ್ರ) ವಿಷಯದ ನೂತನ ಪಠ್ಯಕ್ರಮವನ್ನು ಅನುಮೋದಿಸಿ ದಿನಾಂಕ 09.01.2022ರಂದು ಅಧಿಸೂಚಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಭೆಯು ಅನುಮೋದಿಸಿ, ಸ್ಥಿರೀಕರಿಸಿತು. |
| 5. | 2022–23.ಸಾ.ವಿ.ವಿ.ಪ–01 ಶೈ.ವಿ.–02 | ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಷಯಗಳ ಅಧ್ಯಯನ ಮಂಡಳಿಯನ್ನು ರಚಿಸಿರುವ ಕುರಿತು ಸ್ಥಿರೀಕರಣ ಕೋರಿ. | ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಷಯಗಳ ಅಧ್ಯಯನ ಮಂಡಳಿಯನ್ನು ರಚಿಸಿ ಅಧಿಸೂಚಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಭೆಯು ಅನುಮೋದಿಸಿ, ಸ್ಥಿರೀಕರಿಸಿತು. |
| 6. | 2022–23.ಸಾ.ವಿ.ವಿ.ಪ–01 ಶೈ.ವಿ.–03 | 2022–23ನೇ ಸಾಲಿಗೆ ಎಂ.ಬಿ.ಎ. ಕೋರ್ಸ್‌ನ ಪ್ರವೇಶ ಮಿತಿಯನ್ನು ಹೆಚ್ಚಿಸುವಂತೆ ಕೋರಿರುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಪ್ರಸ್ತುತ ಇರುವ ಎಂ.ಬಿ.ಎ. ಕೋರ್ಸಿನ ಪ್ರವೇಶಮಿತಿಯನ್ನು 60 ರಂತೆಯೇ ಮುಂದುವರೆಸಲು ಹಾಗೂ ಹೆಚ್ಚುವರಿಯಾಗಿ ಕೋರಿರುವ 60 ಸೀಟುಗಳ ಬದಲಿಗೆ MBA (Business Analytics) ಕೋರ್ಸನ್ನು 60 ಪ್ರವೇಶಮಿತಿಯೊಂದಿಗೆ ಮುಂಬರುವ 2023–24ನೇ ಶೈಕ್ಷಣಿಕ ಸಾಲಿನಿಂದ ನಿಯಮಾನುಸಾರ ಪ್ರಾರಂಭಿಸಲು ಅನುಮೋದಿಸಿ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು |
| 7. | 2022–23.ಸಾ.ವಿ.ವಿ.ಪ–01 ಶೈ.ವಿ.–04 | ಸ್ನಾತಕೋತ್ತರ Choice Based Credit System (CBCS) ವಿನಿಯಮವನ್ನು ತಿದ್ದುಪಡಿ/ ಮಾರ್ಪಾಡುಗಳೊಂದಿಗೆ ಪರಿಷ್ಕರಿಸಿ ಸಲ್ಲಿಸಿರುವ ಕುರಿತು. | ಸ್ನಾತಕೋತ್ತರ Choice Based Credit System (CBCS) ವಿನಿಯಮದ ಪರಿಷ್ಕರಣೆ ಕುರಿತು ಸಮಿತಿಯು ಸಿದ್ದಪಡಿಸಿ ಸಲ್ಲಿಸಿರುವ ತಿದ್ದುಪಡಿ/ ಮಾರ್ಪಾಡುಗಳನ್ನು ಪರಿಶೀಲಿಸಿದ |

| | | | |
|---|---|---|---|
| | | | ಸಭೆಯ ಮಾನ್ಯ ಕುಲಾಧಿಪತಿಗಳ ಅನುಮೋದನೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯು ಅನುಮೋದಿಸಿ, ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.<br>ಮುಂದುವರೆದು, ಇನ್ನು ಮುಂದೆ ಯಾವುದೇ ವಿನಿಯಮಗಳನ್ನು ರಚಿಸುವ ಸಂದರ್ಭದಲ್ಲಿ ನಿಯಮದ ಸಾಧಕ ಬಾಧಕಗಳನ್ನು ಎಲ್ಲಾ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗಗಳೊಂದಿಗೆ ಕೂಲಂಕಷವಾಗಿ ಚರ್ಚಿಸಿ, ಅಂತಿಮಗೊಳಿಸುವಂತೆ ಸಭೆಯು ತೀರ್ಮಾನಿಸಿತು. |
| 8. | 2022-23.ಸಾ.ವಿ.ವಿ.ಪ-01 ಶೈ.ವಿ.-05 | ಸ್ನಾತಕ ಬಿ.ವೋಕ್ ಪದವಿಯು ಬಿ.ಎಸ್ಸಿ. ಪದವಿಗೆ ಸಮಾನಾಂತರ ಸ್ನಾತಕ ಪದವಿ ಎಂದು ಸ್ಪಷ್ಟೀಕರಣ ನೀಡಿರುವ ಕುರಿತು ಸ್ಥಿರೀಕರಣ ಕೋರಿ. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ವಿಜ್ಞಾನ ನಿಕಾಯದ ಡೀನರ ಅಭಿಪ್ರಾಯದಂತೆ ಬಿ.ವೋಕ್ ಪದವಿಯನ್ನು ಬಿ.ಎಸ್ಸಿ ಪದವಿಗೆ ಸಮಾನಾಂತರ ಪದವಿ ಎಂದು ಪರಿಗಣಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಭೆಯು ಅನುಮೋದಿಸಿ, ಸ್ಥಿರೀಕರಿಸಿತು. |
| 9. | 2022-23.ಸಾ.ವಿ.ವಿ.ಪ-01 ಶೈ.ವಿ.-06 | ವಿಶ್ವವಿದ್ಯಾನಿಲಯದ ಸ್ನಾತಕ ಬಿ.ಎ. ಇಂಟಿಗ್ರೇಟೆಡ್ ಕನ್ನಡ ಪಂಡಿತ್ ವಿಷಯದ ಅಧ್ಯಯನ ಮಂಡಳಿಯನ್ನು ರಚಿಸಿ ಅಧಿಸೂಚಿಸಿರುವ ಕ್ರಮದ ಸ್ಥಿರೀಕರಣದ ಕುರಿತು. | ವಿಶ್ವವಿದ್ಯಾನಿಲಯದ ಸ್ನಾತಕ ಬಿ.ಎ. ಇಂಟಿಗ್ರೇಟೆಡ್ ಕನ್ನಡ ಪಂಡಿತ್ ವಿಷಯದ ಅಧ್ಯಯನ ಮಂಡಳಿಯನ್ನು ರಚಿಸಿ ಅಧಿಸೂಚಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಭೆಯು ಅನುಮೋದಿಸಿ, ಸ್ಥಿರೀಕರಿಸಿತು. |
| 10. | 2022-23.ಸಾ.ವಿ.ವಿ.ಪ-01 ಶೈ.ವಿ.-07 | ಸ್ನಾತಕ ಬಿ.ಎ. ಇಂಟಿಗ್ರೇಟೆಡ್ ಕನ್ನಡ ಪಂಡಿತ್ ವಿಷಯದ Programme Structure ನ ಸ್ಥಿರೀಕರಣ ಕೋರಿ. | ಸ್ನಾತಕ ಬಿ.ಎ. ಇಂಟಿಗ್ರೇಟೆಡ್ ಕನ್ನಡ ಪಂಡಿತ್ ವಿಷಯದ Programme Structure ನ ರಚಿಸಿ ದಿನಾಂಕ:15.09.2022ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಭೆಯು ಅನುಮೋದಿಸಿ, ಸ್ಥಿರೀಕರಿಸಿತು. |
| **ಹೆಚ್ಚುವರಿ ಕಾರ್ಯಸೂಚಿಗಳು** | | | |
| **ಶೈಕ್ಷಣಿಕ ವಿಭಾಗ** | | | |
| 11. | 2022-23.ಸಾ.ವಿ.ವಿ.ಪ-01 ಶೈ.ವಿ.-08 | ವಿವಿಧ ಸ್ನಾತಕ ಪದವಿ ಕೋರ್ಸುಗಳ ಪಠ್ಯಕ್ರಮಗಳನ್ನು ಅಳವಡಿಸಿಕೊಳ್ಳುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ವಿವಿಧ ಸ್ನಾತಕ ಪದವಿಗಳ 3 ಮತ್ತು 4ನೇ ಸೆಮಿಸ್ಟರ್ ಪಠ್ಯಕ್ರಮಗಳನ್ನು 2022-23ನೇ ಸಾಲಿನಿಂದಲೇ ಅಳವಡಿಸಿಕೊಂಡಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಭೆಯು ಅನುಮೋದಿಸಿ, ಸ್ಥಿರೀಕರಿಸಿತು. |
| 12. | 2022-23.ಸಾ.ವಿ.ವಿ.ಪ-01 ಶೈ.ವಿ.-09 | ವಿವಿಧ ಸ್ನಾತಕ ಪದವಿಗಳ 3 ಮತ್ತು 4ನೇ ಸೆಮಿಸ್ಟರ್‌ಗಳ Programme | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ವಿವಿಧ ಸ್ನಾತಕ ಪದವಿಗಳ 3 ಮತ್ತು 4ನೇ |

| | | | |
|---|---|---|---|
| | | Structure ಕುರಿತು. | ಸೆಮಿಸ್ಟರ್‌ಗಳ Programme Structure 2022-23ನೇ ಸಾಲಿನಿಂದಲೇ ಅಳವಡಿಸಿಕೊಳ್ಳುವಲ್ಲಿ ವಿಶ್ವವಿದ್ಯಾನಿಲಯವು ಕೈಗೊಂಡ ಕ್ರಮವನ್ನು ಸಭೆಯು ಅನುಮೋದಿಸಿ, ಸ್ಥಿರೀಕರಿಸಿತು. |
| 13. | 2022-23.ಸಾ.ವಿ.ವಿ.ಪ-01 ಶೈ.ವಿ.-10 | ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕ ವಿಷಯದ ಅಧ್ಯಯನ ಮಂಡಳಿಯನ್ನು ರಚಿಸಿ ಅಧಿಸೂಚಿಸಿರುವ ಕ್ರಮದ ಸ್ಥಿರೀಕರಣದ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ವಿವಿಧ ಸ್ನಾತಕ ವಿಷಯಗಳ ಅಧ್ಯಯನ ಮಂಡಳಿಗಳನ್ನು ರಚಿಸಿ ಅಧಿಸೂಚಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಭೆಯು ಅನುಮೋದಿಸಿ, ಸ್ಥಿರೀಕರಿಸಿತು. |
| 14. | 2022-23.ಸಾ.ವಿ.ವಿ.ಪ-01 ಶೈ.ವಿ.-11 | ಸ್ನಾತಕ ಶಿಕ್ಷಣ ವಿಷಯದ ಅಧ್ಯಯನ ಮಂಡಳಿಯನ್ನು ರಚಿಸಿರುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಸ್ನಾತಕ ಶಿಕ್ಷಣ ವಿಷಯದ (ಬಿ.ಇಡಿ) ಅಧ್ಯಯನ ಮಂಡಳಿಯನ್ನು ರಚಿಸಿ ಅಧಿಸೂಚಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಭೆಯು ಅನುಮೋದಿಸಿ, ಸ್ಥಿರೀಕರಿಸಿತು. |
| 15. | 2022-23.ಸಾ.ವಿ.ವಿ.ಪ-01 ಶೈ.ವಿ.-12 | ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳ ಪ್ರವೇಶ ಮತ್ತು ಪರೀಕ್ಷಾ ಶುಲ್ಕಗಳನ್ನು ಪೂರ್ಣ ಪ್ರಮಾಣದಲ್ಲಿ ಪಾವತಿಸಿಕೊಳ್ಳುವ ಕುರಿತು. | ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಇತರೆ ವರ್ಗಗಳ ವಿದ್ಯಾರ್ಥಿಗಳಿಂದ ಪ್ರವೇಶಾತಿ ಮತ್ತು ಪರೀಕ್ಷೆಗೆ ಸಂಬಂಧಪಟ್ಟ ಎಲ್ಲಾ ಶುಲ್ಕಗಳನ್ನು ಪೂರ್ಣ ಪ್ರಮಾಣದಲ್ಲಿ ಪಾವತಿಸಿಕೊಳ್ಳಲು ಹಾಗೂ ಸ್ನಾತಕೋತ್ತರ ಪದವಿಗೆ ಘಟಿಕೋತ್ಸವ ಪದವಿ ಪ್ರಮಾಣಪತ್ರದ ಶುಲ್ಕವನ್ನೂ ಸಹ ಪಡೆಯಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| | **ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿದ ಇತರೆ ವಿಷಯಗಳು** | | |
| 16. | ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯಲ್ಲಿ ಪ್ರಥಮ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳಿಂದ ರ‍್ಯಾಂಕ್ ಪದವಿ ಪ್ರಮಾಣಪತ್ರದ ಶುಲ್ಕವನ್ನು ಪಡೆಯದಿರಲು ಸಭೆಯು ತೀರ್ಮಾನಿಸಿತು. | | |
| 17. | ಪಿಹೆಚ್.ಡಿ. ಮಾರ್ಗದರ್ಶಕರಾಗಿ ಮಾನ್ಯತೆ ನೀಡುವ ಸಂಬಂಧ, ಅರ್ಹ ಅಧ್ಯಾಪಕರುಗಳಿಂದ ಸಂಗ್ರಹಿಸುತ್ತಿದ್ದ ರೂ.3,000/- (ಮೂರು ಸಾವಿರ ರೂಪಾಯಿಗಳು ಮಾತ್ರ) ಗಳ ಶುಲ್ಕವನ್ನು ಇನ್ನು ಮುಂದೆ ಸಂಗ್ರಹಿಸದೇ ಮಾರ್ಗದರ್ಶಕರಾಗಿ ಮಾನ್ಯತೆಯನ್ನು ನೀಡಲು (Ph.D. Guideship) ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. | | |
| 18. | ತುಮಕೂರು ವಿಶ್ವವಿದ್ಯಾನಿಲಯದ ಪರೀಕ್ಷಾ ಮೌಲ್ಯಮಾಪನ ಕೇಂದ್ರವನ್ನು ಕಲ್ಪತರು ಪ್ರಥಮ ದರ್ಜೆ ಕಾಲೇಜು, ತಿಪಟೂರು ಇಲ್ಲಿ ಹೊಸದಾಗಿ ಪ್ರಾರಂಭಿಸಲು ಸಭೆಯು ತೀರ್ಮಾನಿಸಿತು. | | |

**ಮಾನ್ಯ ಕುಲಸಚಿವರು** | **ಮಾನ್ಯ ಕುಲಪತಿಗಳು**